# ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ

(ಕರ್ನಾಟಕ ಸರ್ಕಾರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಂಯೋಜಿತ ನೋಂದಾಯಿತ ಸ್ವಾಯತ್ತ ಸಂಸ್ಥೆ)




ಮಾಸ್ಟರ್ ಕಂಟ್ರೋಲ್ ಫೆಸಿಲಿಟಿ ಕಟ್ಟಡದ ಒಂದು ನೋಟ




## ಕೆಎಸ್‌ಎನ್‌ಡಿಎಂಸಿಯ ಸೇವೆ ಮತ್ತು ಸಲಹೆಗಳು

ಮೇಜರ್ ಸಂದೀಪ್ ಉನ್ನಿ ಕೃಷ್ಣನ್ ರಸ್ತೆ, ಅಟ್ಟೂರು ಲೇಔಟ್ ಹತ್ತಿರ, ಯಲಹಂಕ, ಬೆಂಗಳೂರು 560 064
Website: dmc.kar.nic.in, E-mail:dmc.kar@gmail.com, dmc.kar@nic.in
ದೂರವಾಣಿ : 080 67355000, ಫ್ಯಾಕ್ಸ್ : 080 67355198

# ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ಕಿರು ಟಿಪ್ಪಣಿ

**ಪೀಠಿಕೆ :**

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರಾಜ್ಯದಲ್ಲಿ ಮರುಕಳಿಸುವ ವಿಕೋಪಗಳ ನಿರ್ವಹಣೆಯಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸುವ ವೇದಿಕೆಯಾಗಿರುತ್ತದೆ. ನೈಸರ್ಗಿಕ ವಿಕೋಪಗಳಾದ ಬರ, ನೆರೆಹಾವಳಿ, ಭೂಕಂಪನ, ಭೂಕುಸಿತ ವಿಷಯಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಮಾಹಿತಿಯನ್ನು ಸಮಯೋಚಿತವಾಗಿ ಸರ್ಕಾರಕ್ಕೆ ಹಾಗೂ ಸಮುದಾಯಕ್ಕೆ ನೀಡುತ್ತಿದೆ. ಈ ಕೇಂದ್ರದಲ್ಲಿ ನೈಸರ್ಗಿಕ ವಿಕೋಪ ಉಸ್ತುವಾರಿಗೆ ಅಳವಡಿಸಿರುವ ಅತ್ಯಾಧುನಿಕ ಉಪಕರಣಗಳು, ತಂತ್ರಜ್ಞಾನ ಹಾಗೂ ತತ್ರಾಂಶಗಳು ದೇಶದಲ್ಲೇ ಮಾದರಿಯಾಗಿದೆ. ಈ ಕೇಂದ್ರವು ಹೋಬಳಿಮಟ್ಟದ ಹವಾಮಾನ ಮುನ್ಸೂಚನೆ, ಮುನ್ನೆಚ್ಚರಿಕೆ ಸಂದೇಶಗಳು ಹಾಗೂ ವೈಜ್ಞಾನಿಕ ವರದಿಗಳನ್ನು ನೀಡುತ್ತಿದೆ.

**ಕೇಂದ್ರದ ಮುಖ್ಯ ಕಾರ್ಯಕ್ರಮಗಳು**

1. ನೈಸರ್ಗಿಕ ವಿಕೋಪಗಳ ಉಸ್ತುವಾರಿ ಮತ್ತು ಪರಿಣಾಮಗಳನ್ನು ಅಂದಾಜಿಸುವುದು.
2. ವಿಪತ್ತುಗಳ ಮುನ್ಸೂಚನೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು.
3. ನೈಸರ್ಗಿಕ ವಿಕೋಪಗಳ ನಿರ್ವಹಣೆಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬಲಗೊಳಿಸುವಿಕೆ.
4. ವಿವಿಧ ವಿಕೋಪಗಳಿಗೆ ತುತ್ತಾಗುವ ಪ್ರದೇಶಗಳನ್ನು ಗುರುತಿಸಿ ನಕ್ಷೆ ತಯಾರಿಸುವುದು ಮತ್ತು ಅಧ್ಯಯನ.
5. ರಾಜ್ಯ ಸರ್ಕಾರದ ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಜಲ ಸಂಪನ್ಮೂಲ ಇಲಾಖೆ, ಇಂಧನ ಇಲಾಖೆ, ಗೃಹ ಇಲಾಖೆ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಜಿಲ್ಲಾ ಮತ್ತು ನಿರ್ವಹಣಾ ವಿಪತ್ತು ನಿರ್ವಹಣಾ ಪ್ರಾಧಿಕಾರಗಳಿಗೆ ಸಕಾಲಿಕವಾಗಿ ನೈಸರ್ಗಿಕ ವಿಕೋಪಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುವುದು.
6. ತರಬೇತಿ ನೀಡುವ ಮೂಲಕ ಮಾನವ ಸಂಪನ್ಮೂಲ ಅಭಿವೃದ್ಧಿಗೊಳಿಸುವುದು.
7. ರಾಜ್ಯದಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ಸಂಬಂಧಪಟ್ಟಂತೆ ಮಳೆ, ಗಾಳಿಯ ವೇಗ, ಆರ್ದ್ರತೆ, ಉಷ್ಣಾಂಷಗಳ ಮಾಹಿತಿ ನೀಡುವುದು.
8. ರೈತಾಪಿ ವರ್ಗ ಹಾಗೂ ಜನಸಾಮಾನ್ಯರಿಗೆ ಹವಾಮಾನ ಸಂಬಂಧಿತ ಮಾಹಿತಿ, ಮೂನ್ಸೂಚನೆ ಮತ್ತು ಸಲಹೆ ಒದಗಿಸುವುದು.

## ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದಿಂದ ಕೈಗೊಂಡ ಚಟುವಟಿಕೆಗಳು ಕೆಳಕಂಡಂತಿವೆ:

### ಅ. ದೂರಸ್ಥ ಮಳೆ ಮಾಪನ ಮತ್ತು ಹವಾಮಾನ ಕೇಂದ್ರಗಳ ನಿರ್ವಹಣೆ :

- ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ಸ್ಥಾಪಿಸಿರುವ 2090 ದೂರಸ್ಥ ಮಳೆ ಮಾಪನ ಕೇಂದ್ರಗಳು ಹಾಗೂ 747 ದೂರಸ್ಥ ಹವಾಮಾನ ಮಾಪನ ಕೇಂದ್ರಗಳ ಜಾಲದ ನಿರ್ವಹಣೆಯನ್ನು ಸಮರ್ಪಕವಾಗಿ ಸಕಾಲಿಕವಾಗಿ ಮಾಡಲಾಯಿತು.
- 2013–14 ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಚಾಮರಾಜನಗರ, ಚಿತ್ರದುರ್ಗ, ಹಾವೇರಿ, ಗುಲ್ಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಒಟ್ಟು 584 ದೂರಸ್ಥ ಮಳೆ ಮಾಪನ ಕೇಂದ್ರಗಳು

ಹಾಗೂ 90 ದೂರಸ್ಥ ಹವಾಮಾನ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಕ್ರಮಕೈಗೊಂಡಿದೆ ಹಾಗೂ ನವೆಂಬರ್ 2013ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ 603 ಗ್ರಾಮಪಂಚಾಯತಿಗಳಲ್ಲಿ ದೂರಸ್ಥ ಮಳೆ ಮಾಪನ ಕೇಂದ್ರಗಳು, 523 ಹೋಬಳಿಗಳಲ್ಲಿ ದೂರಸ್ಥ ಹವಾಮಾನ ಮಾಪನ ಕೇಂದ್ರಗಳನ್ನು ಸ್ಥಾಪಿಸಲು ಕಾರ್ಯ ಪ್ರಗತಿಯಲ್ಲಿದ್ದು ಹಾಗೂ ಡಿಸೆಂಬರ್ 2013ರ ಅಂತ್ಯಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.
- 2013–14 ನೇ ಸಾಲಿನಲ್ಲಿ ಈ ಕೇಂದ್ರವು ನೈಸರ್ಗಿಕ ವಿಕೋಪಗಳಾದ ಬರ, ಪ್ರವಾಹ, ಚಂಡಮಾರುತ, ಭೂಕುಸಿತ, ಭೂಕಂಪನ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ 700 ವರದಿಗಳನ್ನು ಸಿದ್ದಪಡಿಸಿ, ರಾಜ್ಯ, ಜಿಲ್ಲೆ, ತಾಲ್ಲೂಕು, ಹೋಬಳಿ ಮತ್ತು ಗ್ರಾಮಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಸಕಾಲದಲ್ಲಿ ತಲುಪಿಸಿದೆ.
- ಮಾಹಿತಿ ತಂತ್ರಜ್ಞಾನ ಆಧಾರಿತ ದತ್ತಾಂಶ ನಿರ್ವಹಣೆಗೆ ತಂತ್ರಾಂಶವನ್ನು ಅಭಿವೃದ್ದಿಪಡಿಸಿ ಅದರ ಮೂಲಕ ಮುನ್ಸೂಚನೆ ಹಾಗೂ ಮುನ್ನೆಚ್ಚರಿಕೆ ಸಂದೇಶಗಳನ್ನು 24X7X365 ದಿನಗಳೂ ಸ್ವಯಂಚಾಲಿತವಾಗಿ ರವಾನಿಸುವುದಕ್ಕೆ ಕ್ರಮಕೈಗೊಳ್ಳಲಾಗಿದೆ.
- ತೀವ್ರತರ ಮಳೆ, ಭಾರಿ ಮಳೆ ಮತ್ತು ಅತೀ ಹೆಚ್ಚಿನ ಮಳೆಗೆ ಸಂಬಂಧಿಸಿದ ಎಚ್ಚರಿಕೆ ಸಂದೇಶಗಳನ್ನು SMS ಗಳ ಮೂಲಕ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ತಹಸೀಲ್ದಾರರು, ಜಂಟಿ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, ಸಹಾಯಕ ಕೃಷಿ ಅಧಿಕಾರಿಗಳು ಮತ್ತು ಮಾಧ್ಯಮಗಳಿಗೆ ರವಾನಿಸಲಾಗುತ್ತಿದೆ. 2013–14 ನೇ ಸಾಲಿನಲ್ಲಿ ಒಟ್ಟು ಸುಮಾರು 43 ಲಕ್ಷ SMS ಗಳನ್ನು ಕಳುಹಿಸಲಾಗಿದೆ.

**ಆ. ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ :**

- ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗೆ ಈ ಕೇಂದ್ರವನ್ನು ನೋಡಲ್ ಕೇಂದ್ರವನ್ನಾಗಿ ಗುರುತಿಸಲಾಗಿದೆ. ಹವಾಮಾನ ಆಧಾರಿತ ಬೆಳೆವಿಮೆ ಯೋಜನೆ product ಗಳ ವಿನ್ಯಾಸ, ಅಭಿವೃದ್ಧಿ ಹಾಗೂ ವಿಶ್ಲೇಷಣೆಗೆ ಅಗತ್ಯವಿರುವ ತಾಂತ್ರಿಕ ನೆರವನ್ನು ರಾಜ್ಯಮಟ್ಟದ ಬೆಳೆ ವಿಮೆ ಯೋಜನೆ ಸಂಯೋಜನಾ ಸಮಿತಿಗೆ ನೀಡಲಾಗಿದೆ.

**ಇ. ಹೋಬಳಿ ಮಟ್ಟದಲ್ಲಿ ಹವಾಮಾನ ಮುನ್ಸೂಚನೆ :**

- ಹೋಬಳಿ ಮಟ್ಟದಲ್ಲಿ ಹವಾಮಾನ ಮುನ್ಸೂಚನೆಯನ್ನು ಪ್ರತಿದಿನ 2 ಬಾರಿ – ಬೆಳಗ್ಗೆ 8.30 ಮತ್ತು ಮಧ್ಯಾಹ್ನ 4.30 ಕ್ಕೆ ನೀಡಲಾಗುತ್ತಿದೆ. ಹವಾಮಾನ ಮುನ್ಸೂಚನೆ ಮತ್ತು ಮಾಹಿತಿಯನ್ನೊಳಗೊಂಡ ದೈನಂದಿನ ವರದಿಯನ್ನು ರಾಜ್ಯದ ಕಂದಾಯ ಹಾಗೂ ಕೃಷಿ ಇಲಾಖೆಯ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಹೋಬಳಿಮಟ್ಟದ ಅಧಿಕಾರಿಗಳಿಗೆ ಈಮೇಲ್ ಮೂಲಕ ತಲುಪಿಸಲಾಗುತ್ತಿದೆ. ಈ ಕೇಂದ್ರದ ಅಂತರ್ಜಾಲ ತಾಣದ ಮೂಲಕ ಹವಾಮಾನ ಮುನ್ಸೂಚನೆಯನ್ನು ಜನಸಾಮಾನ್ಯರಿಗೆ ಒದಗಿಸಲಾಗುತ್ತಿದೆ.
- ಹೋಬಳಿಮಟ್ಟದಲ್ಲಿ ಹವಾಮಾನ ಮುನ್ಸೂಚನೆಯನ್ನು ನೇರವಾಗಿ ರೈತರಿಗೆ ಹಾಗೂ ಜನಸಾಮಾನ್ಯರಿಗೆ ತಲುಪಿಸಲು 3 ದೂರವಾಣಿ ಸಂಪರ್ಕವುಳ್ಳ (9243345433, 080–22745232/34) ಸಹಾಯವಾಣಿಯನ್ನು ಈ ಕೇಂದ್ರದಲ್ಲಿ ತೆರೆಯಲಾಗಿದೆ. ಈ ಸಹಾಯವಾಣಿಯು ಒಮ್ಮೆಲೇ 32

ಕರೆಗಳನ್ನು ಸ್ವೀಕರಿಸಲು ಬೇಕಾದ ತಾಂತ್ರಿಕ ಸೌಲಭ್ಯವನ್ನು ಹೊಂದಿದ್ದು, 24X7X365 ದಿನಗಳು ಕಾರ್ಯನಿರ್ವಹಿಸುತ್ತಿದೆ. 2013-14 ರ ಸಾಲಿನಲ್ಲಿ 1,82,439 ರೈತರು ಈ ಸಹಾಯವಾಣಿ ಸೌಲಭ್ಯದ ಪ್ರಯೋಜನ ಪಡೆದಿರುತ್ತಾರೆ.

- Institute for social and economic change (ISEC) ರವರು ಈ ಸಹಾಯವಾಣಿಯ ಬಗ್ಗೆ ನಡೆಸಿದ ಅಧ್ಯಯನದ ವರದಿಯ ಪ್ರಕಾರ ಶೇ.85 ರಷ್ಟು ರೈತರು ಈ ಸಹಾಯವಾಣಿಯ ಮೂಲಕ ಪಡೆಯುತ್ತಿರುವ ಮಾಹಿತಿಯಿಂದ ಸಂತೃಪ್ತರಾಗಿದ್ದು, ಈ ಮಾಹಿತಿಯು ಅವರ ಕೃಷಿ ಚಟುವಟಿಕೆಗಳಿಗೆ ಸಹಾಯಕವಾಗಿರುವುದಾಗಿ ತಿಳಿದುಬಂದಿದೆ. ಈ ಸಹಾಯವಾಣಿಯ ಪ್ರಯೋಜನ ಪಡೆಯುತ್ತಿರುವ ಪ್ರತಿಯೊಬ್ಬ ರೈತನೂ ತನ್ನ ಕ್ಷೇತ್ರದಲ್ಲಿ ಕನಿಷ್ಠ 20-30 ಜನಕ್ಕೆ ಮಾಹಿತಿಯನ್ನು ತಲುಪಿಸುವುದು ಕಂಡುಬಂದಿದ್ದು, ಈ ಪ್ರಕಾರ ಅಂದಾಜು 8 ಲಕ್ಷ ರೈತರು ಈ ಸಹಾಯವಾಣಿಯ ಸೌಲಭ್ಯದ ಪ್ರಯೋಜನ ಪಡೆದಿದ್ದಾರೆ.
- 2013-14 ನೇ ಸಾಲಿನ ಹವಾಮಾನ ಮುನ್ಸೂಚನೆಯನ್ನಾಧಾರಿಸಿ ಸಹಾಯವಾಣಿಯ ಮೂಲಕ ಕರ್ನಾಟಕದ ಉತ್ತರ ಒಳನಾಡಿನ ರೈತರಿಗೆ ಒಣ ಬಿತ್ತನೆ ಮಾಡದಿರುವಂತೆ ಮುಂಗಾರು ಆರಂಭದಲ್ಲಿ ನೀಡಿದ ಸಲಹೆಯೊಂದರಿಂದಲೇ ರೈತರಿಗೆ ಅಂದಾಜು 25 ಕೋಟಿ ರೂಪಾಯಿಗಳಿಗೂ ಹೆಚ್ಚು ಉಳಿತಾಯವಾಗಿದೆ.

### ಈ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ತಾಂತ್ರಿಕ ನೆರವು :

- ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರವು ರಾಜ್ಯ ಸರ್ಕಾರದ ಈ ಕೆಳಕಂಡ ಇಲಾಖೆಗಳಿಗೆ ತಾಂತ್ರಿಕ ನೆರವನ್ನು ನೀಡಿದೆ.
- ಕಂದಾಯ ಇಲಾಖೆ, ಕೃಷಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಜಲಸಂಪನ್ಮೂಲ ಇಲಾಖೆಗಳಿಗೆ ತಾಂತ್ರಿಕ ನೆರವು.
- ರಾಜ್ಯದಲ್ಲಿ ಬರನಿರ್ವಹಣೆಗಾಗಿ ಕೇಂದ್ರ ಸರ್ಕಾರದಿಂದ ಅಗತ್ಯ ನೆರವನ್ನು ಕೋರುವ ಸಲುವಾಗಿ ಮನವಿಯನ್ನು ಸಿದ್ಧಪಡಿಸಲು ಹಾಗೂ ರಾಜ್ಯ ಸಂಪುಟ ಉಪಸಮಿತಿ ಮತ್ತು ಕೇಂದ್ರ ಅಧ್ಯಯನ ತಂಡಗಳಿಗೆ ಅಗತ್ಯ ತಾಂತ್ರಿಕ ನೆರವು.
- ರಾಜ್ಯದ ಬರಪರಿಸ್ಥಿತಿಯನ್ನು ನಿರ್ವಹಿಸುವ ಸಲುವಾಗಿ ರಚಿಸಿದ ಸಂಪುಟ ಸಮಿತಿ ಮತ್ತು ಸಂಪುಟ ಉಪಸಮಿತಿಗಳಿಗೆ ನೆರವು.
- ಅಂತರ್‌ರಾಜ್ಯ ಕಾವೇರಿ ಜಲವಿವಾದ ಸಂಬಂಧ ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ಸಭೆಗೆ ರಾಜ್ಯದ ನ್ಯಾಯವಾದಿಗಳಿಗೆ ಮತ್ತು ಕಾವೇರಿ ನದಿ ಪ್ರಾಧಿಕಾರಕ್ಕೆ ಅಗತ್ಯ ತಾಂತ್ರಿಕ ನೆರವು.

### ಉ. ಭೂಕಂಪನ ಹಾಗೂ ಭೂಕುಸಿತಗಳ ಅಧ್ಯಯನ :

- ರಾಜ್ಯದಲ್ಲಿ ಸ್ಥಾಪಿಸಲಾಗಿರುವ 13 VSAT ಆಧಾರಿತ ಶಾಶ್ವತ ಭೂಕಂಪನ ಕೇಂದ್ರಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ. 2013-14 ನೇ ಸಾಲಿನಲ್ಲಿ ಒಟ್ಟು 95 ಭೂಕಂಪನಗಳು – ಕರ್ನಾಟಕ ರಾಜ್ಯದಲ್ಲಿ 6, ದೇಶದ ಇತರೆ ರಾಜ್ಯಗಳಲ್ಲಿ 43 ಹಾಗೂ ಹೊರದೇಶಗಳಲ್ಲಿ ಸಂಭವಿಸಿದ 46 ಭೂಕಂಪನಗಳನ್ನು KSNDMC ಯ ಭೂಕಂಪನ ಮಾಪನ ಕೇಂದ್ರಗಳು ದಾಖಲಿಸಿವೆ.

- 2013–14 ನೇ ಸಾಲಿನಲ್ಲಿ ಭೂಕಂಪನ ಮತ್ತು ಸುನಾಮಿಗೆ ಸಂಬಂಧಿಸಿದ ಮಾಹಿತಿಯನ್ನೊಳಗೊಂಡ ಒಟ್ಟು 18,050 SMS ಗಳನ್ನು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಸಂಬಂಧಪಟ್ಟವರಿಗೆ ಕಳುಹಿಸಲಾಗಿದೆ.
- ಭೂಕಂಪನ ಮಾಪನ ಜಾಲವನ್ನು ರಾಜ್ಯದ ಇನ್ನುಳಿದ ದೊಡ್ಡ ಅಣೆಕಟ್ಟುಗಳಿಗೆ ವಿಸ್ತರಿಸುವ ಬಗ್ಗೆ ತಾಂತ್ರಿಕ ಮಾಹಿತಿಯನ್ನು ರಾಜ್ಯದ ಅಣೆಕಟ್ಟು ಸುರಕ್ಷತಾ ಸಮಿತಿಗೆ (Dam Safety Committee) ನೀಡಲಾಗಿದೆ.
- ಬೆಂಗಳೂರು ಜಲಮಂಡಳಿಯವರ ಕೋರಿಕೆ ಮೇರೆಗೆ ತಿಪ್ಪಗೊಂಡನಹಳ್ಳಿ ಜಲಾಶಯದ ಸುತ್ತಮುತ್ತ ದಾಖಲಾಗಿರುವ ಕಲ್ಲುಗಣಿ ಶಿಲಾ ಸ್ಫೋಟಕಗಳ ಬಗ್ಗೆ KSNDMC ಯ 13 ಭೂಕಂಪನ ಮಾಪನ ಕೇಂದ್ರಗಳ ಮಾಹಿತಿಯನ್ನಾಧಾರಿಸಿ ವರದಿಯನ್ನು ತಯಾರಿಸಿ ಸಲ್ಲಿಸಲಾಗಿದೆ.
- ರಾಜ್ಯದಲ್ಲಿ ಇಲ್ಲಿಯವರೆಗೂ ಸಂಭವಿಸಿದ ಭೂಕುಸಿತದ ಬಗ್ಗೆ ಮಾಹಿತಿಯನ್ನು ಕ್ರೂಢೀಕರಿಸಿ ಭೂಕುಸಿತ ಸಂಬಂಧಿತ ನಕ್ಷೆಗಳನ್ನು ತಯಾರಿಸಲಾಗಿದೆ.

**ಊ. ತರಬೇತಿ ಮತ್ತು ಕಾರ್ಯಗಾರಗಳು :**

- ಆಡಳಿತ ತರಬೇತಿ ಸಂಸ್ಥೆ (ATI), ಮೈಸೂರುರವರು ಕೈಗೊಂಡ ವಿಪತ್ತು ನಿರ್ವಹಣಾ ತರಬೇತಿ ಕಾರ್ಯಕ್ರಮಗಳಲ್ಲಿ ತಾಂತ್ರಿಕ ಸಂಪನ್ಮೂಲ ಒದಗಿಸಲಾಯಿತು. ಈ ತರಬೇತಿಗಳಿಂದ 1000 ಕ್ಕೂ ಅಧಿಕ ಅಧಿಕಾರಿ ವರ್ಗದವರು ಇದರ ಪ್ರಯೋಜನ ಪಡೆದಿರುತ್ತಾರೆ.
- ಗೌತಮ್ ವಿಜ್ಞಾನ ಮಹಾವಿದ್ಯಾಲಯ, ಅಶೋಕ ಇಂಟರ್‌ನ್ಯಾಷನಲ್ ಸ್ಕೂಲು, ಸಿಂಧಿ ಕಾಲೇಜು, ಮೇಘಾಲಯ ರಾಜ್ಯದ ಅಧ್ಯಯನ ತಂಡ, ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (AEE), ನಾಗರಿಕ ರಕ್ಷಣಾ ಸಂಸ್ಥೆಗಳ ಸ್ವಯಂ ಸೇವಕರಿಗೆ ನೈಸರ್ಗಿಕ ವಿಕೋಪ ಉಸ್ತುವಾರಿಯ ಬಗ್ಗೆ ತರಬೇತಿಯನ್ನು ಈ ಕೇಂದ್ರದಲ್ಲಿ ನೀಡಲಾಯಿತು.
- ದಾವಣಗೆರೆ, ಧಾರವಾಡ, ಕರ್ನಾಟಕ ರಾಜ್ಯ ನೈಸರ್ಗಿಕ ಉಸ್ತುವಾರಿ ಕೇಂದ್ರ, ಕನಕಪುರಗಳಲ್ಲಿ ನಡೆದ ಕೃಷಿ ಮಾಹಿತಿ ಆಂದೋಲನ – 2013ರಲ್ಲಿ ಮಾಹಿತಿ ಒದಗಿಸಲಾಗಿದೆ.

**ಋ. ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯ ಚಟುವಟಿಕೆಗಳು :**

- 3657 ಗ್ರಾಮಪಂಚಾಯಿತಿಗಳಲ್ಲಿ ದೂರಸ್ಥ ಮಳೆಮಾಪನ ಕೇಂದ್ರಗಳನ್ನು 2013–2014 ಹಾಗೂ 2014–15ರ ಸಾಲಿನಲ್ಲಿ ಸ್ಥಾಪಿಸಲು ಉದ್ದೇಶಿಸಿದೆ.
- ರಾಜ್ಯದಲ್ಲಿ 8 ಸಿ–ಬ್ಯಾಂಡ್ ಹಾಗೂ ಮೂರು ಎಕ್ಸ್ ಬ್ಯಾಂಡ್ ಡಾಪ್ಲರ್ ವೆದರ್ ರಾಡಾರ್ ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.
- ರಾಜ್ಯದ ಕರಾವಳಿಯಲ್ಲಿ 5 ಸಮುದ್ರ ಉಬ್ಬರ ಮಾಪನ ಕೇಂದ್ರಗಳನ್ನು ಅಳವಡಿಸಲು ಉದ್ದೇಶಿಸಿದೆ.
- ಭೂಕಂಪನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಿಜ ಸಮಯದಲ್ಲಿ ವಿಶ್ಲೇಷಿಸಲು ಅನುವಾಗುವ ತಂತ್ರಾಂಶ ಅಳವಡಿಸುವುದು.

- ISHAM –K (Integrated Information System on Horticulture and Agriculture Management –Karnataka). ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಕರ್ನಾಟಕ ಸರ್ಕಾರ ಇವರ ಸಲಹೆಯಂತೆ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ನಿರ್ವಹಣೆ ಸಂಭಂದಿತ ಸಮಗ್ರ ಮಾಹಿತಿಯನ್ನು ಒಳಗೊಂಡ ವ್ಯವಸ್ಥೆಯನ್ನು ಅಭಿವೃದ್ದಿಪಡಿಸುವುದು.
- ಆಡಳಿತ ವ್ಯವಸ್ಥೆಗೆ ಅನುವಾಗಲು ಹೈಡ್ರಾಲಾಜಿಕಲ್ ಮತ್ತು ಅಗ್ರಿಕಲ್ಚರಲ್ ಮ್ಯಾಥಮ್ಯಾಟಿಕಲ್ ಮಾದರಿಗಳನ್ನು ಅಭಿವೃದ್ಧಿಪಡಿಸುವುದು.

# DISASTER MONITORING, INFORMATION GENERATION AND DISSEMINATION



GPRS enabled Telemetric Raingauges



GPRS enabled Telemetric Weather Station Network



Seismological Observatory (Gulbarga District)



Broadband Seismometer



Strong Motion Accelerograph



Digitizer



VSAT Equipment



Solar Power Supply System



KSNDMC 25 Years

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ

(ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಂಯೋಜಿತ, ನೋಂದಾಯಿತ ಸ್ವಾಯತ್ತ ಸಂಸ್ಥೆ)

# ವರುಣ ಮಿತ್ರ

## ಹವಾಮಾನ ಮತ್ತು ನೈಸರ್ಗಿಕ ವಿಕೋಪ ಸಂಬಂಧಿತ ಮಾಹಿತಿ, ಮುಂಜಾಗ್ರತೆ, ಮುನ್ಸೂಚನೆ, ಸಹಾಯವಾಣಿ

## (24X7X365)



9243345433

080-22745232

080-22745234

